

ಕಾಂಚನಜುಂಗಾ ಹೊನ್ನ ಶಿಖರಗಳ ಹಿನ್ನೆಲೆಯಲ್ಲಿ ಹಸುರ ಸಿರಿ

ಸುಷುಪ್ತಿಯಲ್ಲಿ ಸಿಲುಕಿದವರು ಯಾರು ಎಂಬುದು ಅರಿವಾಗುತ್ತಿರಲಿಲ್ಲ.

ಇದೆಲ್ಲವನ್ನೂ ನೋಡಿ ನಾವು ಡಾರ್ಜಿಲಿಂಗ್‌ನ ಟಿಬೆಟಿನ ನಿರಾಶ್ರಿತರ ಕ್ಯಾಂಪಿಗೆ ಬಂದಾಗ ಬೆಳಿಗ್ಗೆಯಷ್ಟೇ ನೋಡಿದ ಕನಸುಗಳೆಲ್ಲ ಕಮರಿ ಹೋಗಿಬಿಟ್ಟವು. ತಗಡಿನಲ್ಲಿ, ಮರದ ಹಲಗೆಗಳಲ್ಲಿ ನಿರ್ಮಿಸಿದ ತಾತ್ಕಾಲಿಕ ಶೆಡ್ಡುಗಳಲ್ಲಿ ಜೀವಮಾನವನ್ನೇ ಸವೆಸುತ್ತಿರುವ ದೇಶವಿಹೀನ ಮಂದಿಯ ಬದುಕನ್ನು ನೋಡಿ ನಮ್ಮೊಳಗೆ ಪಾಪಪ್ರಜ್ಞೆ ಮೂಡತೊಡಗಿತು. ‘ಪ್ರಪಂಚದ ಸೂರು’ ಎಂದು ಕರೆಯಲಾಗುವ ಟಿಬೆಟಿನ ಮಂದಿ ಪ್ರಪಂಚದ ನಾನಾ ಮೂಲೆಗಳಲ್ಲಿ ಮುರುಕು ಜೋಪಡಿಗಳಲ್ಲಿ ಅಲ್ಲಿನ ಸರ್ಕಾರಗಳು ಹಾಕಿದ ಹಿಡಿಕೂಳು ತಿನ್ನುತ್ತ ಕಾಲ ಕಳೆಯುತ್ತಿರುವುದು ಇತಿಹಾಸದ ಕ್ರೌರ್ಯಕ್ಕೆ ಸಾಕ್ಷಿಯಂತಿದೆ.

ಭಾರತದ ಭೂಪಟದ ಎಡಕ್ಕಿರುವ ಆಜಾನುಬಾಹು ಭುಜದ ಮೇಲಿರುವ ಟಿಬೆಟ್ ಎಂಬ ಪುಟ್ಟ ದೇಶ ಚಿಕ್ಕಪ್ಪನದೋ ಮಾವನದೋ ಹೆಗಲನ್ನು ಗಟ್ಟಿಹಿಡಿದು ಅಡ್ಡಬಿದ್ದಿರುವ ಕೂಸುಮರಿಯಂತಿದೆ. ಇಂಥ ಕೂಸುಮರಿಯನ್ನು 1959ರಲ್ಲಿ ಚೀನಾ, ಸಮತಾವಾದ ಸಮಾಜವಾದಗಳೆಂಬ ಎತ್ತರದ ಮಾತುಗಳನ್ನು ಆಡುತ್ತ ಆಕ್ರಮಣ ಮಾಡಿದಾಗ ಲಕ್ಷಾಂತರ ಟಿಬೆಟನ್ನರು ತಮ್ಮ ಧರ್ಮಗುರುಗಳಾದ ದಲೈಲಾಮಾರೊಂದಿಗೆ ಭಾರತಕ್ಕೆ ಆಶ್ರಯಕೋರಿ ಬಂದರು. ಜಾರುವ ಹಿಮಪರ್ವತಗಳ ಅಂಚಿನಲ್ಲಿ, ಭೋರ್ಗರೆಯುವ ಶೀತಗಾಳಿಯ ನಿರಂತರ ಹಾವಳಿಯಲ್ಲಿ ನಡೆದುಬಂದ ಟಿಬೆಟನ್ನರನ್ನು ಅಂದಿನ ಪ್ರಧಾನಿ ನೆಹರೂ, ಗೃಹಮಂತ್ರಿ ವಲ್ಲಭಭಾಯಿ ಪಟೇಲರು ಹಾಗೂ ಸಿಕ್ಕಿಂ ಸರ್ಕಾರದ ಬಹುಮುಖ್ಯ ಅಧಿಕಾರಿಯಾದ ಪಿ.ಎನ್. ಮೆನನ್ ಅವರನ್ನು ನಾಥುಲಾ ಪಾಸ್ ಗಡಿಗೆ ಕಳುಹಿಸಿ ಸ್ವಾಗತಿಸಿ ಬೆಚ್ಚಗಿಟ್ಟು ಪೊರೆದರು. ಅಸಹಾಯಕರಾಗಿ ಬಂದವರಿಗೆ ಆಶ್ರಯಕೊಟ್ಟಿದ್ದೇ ಅಲ್ಲದೆ ಇವತ್ತಿನವರೆಗೂ ಅವರನ್ನು ಬೀದಿಗೆ ತಳ್ಳದೆ, 65ಕ್ಕೂ ಹೆಚ್ಚು ವರ್ಷಗಳ ನಂತರವೂ ಸಲಹುತ್ತಿರುವ ನಮ್ಮ ದೇಶ ದೊಡ್ಡದಾಗಿ ಕಾಣುವುದು ಇಂಥ ಗಳಿಗೆಗಳಲ್ಲೇ.

ಬುದ್ಧನನ್ನು ಆರಾಧಿಸುವ ನಾಡಿನಿಂದ ಬಂದ ದಲೈಲಾಮ ‘ನಿಜವಾದ ಅರ್ಥದಲ್ಲಿ ನಾನು ಭಾರತದ ಮಗ’ ಎಂದು ಹೇಳಿದ್ದು ಇಂಥ ಹಿರಿತನವನ್ನು ನೋಡಿಯೇ. ಟಿಬೆಟನ್ನರಿಗೆ ಭಾರತವೂ ಸೇರಿದಂತೆ ಹಲವು ದೇಶಗಳು ಆಶ್ರಯ ನೀಡಿವೆ. ಹಿಮಾಚಲದ ಧರ್ಮಶಾಲಾ, ಲಡಾಖ್, ಕರ್ನಾಟಕದ ಬೈಲುಕುಪ್ಪೆ, ಮುಂಡಗೋಡು ಸೇರಿದಂತೆ ನೇಪಾಳ, ಭೂತಾನ್, ಕೆನಡಾ, ಅಮೆರಿಕಗಳಲ್ಲಿ ಹರಿದು ಹಂಚಿಹೋಗಿರುವ ಟಿಬೆಟನ್ನರನ್ನು ಮಾತಾಡಿಸಿದರೆ ಅವರ ಕಣ್ಣುಗಳಲ್ಲಿ ಟಿಬೆಟಿನ ಹೆಸರು ಕೇಳಿದಾಗ ಹೊಳೆಯುವ ಮಿಂಚು ಕರ್ನಾಟಕದ ಬೈಲುಕುಪ್ಪೆಯ ಹೆಸರು ಕೇಳಿದಾಗಲೂ ದಿಗ್ಗನೆ ಕೋರೈಸುತ್ತದೆ.

ಪ್ರಪಂಚದ ಸೂರಿನಿಂದ ಹೊರದಬ್ಬಿಸಿಕೊಂಡ ಟಿಬೆಟನ್ನರು ಇನ್ನಾವುದೋ ದೇಶದ ತುಂಡುನೆಲವೊಂದರಲ್ಲಿ ಬದುಕುತ್ತಾ ತಮ್ಮ ತಾಯ್ನಾಡಿನ ನೆಲಕ್ಕೆ ಮತ್ತೊಮ್ಮೆ ಕಾಲಿಡುತ್ತೇವೆ ಎಂದು ಕಾಯುತ್ತಲೇ ಇದ್ದಾರೆ. ಅಲ್ಲಿರುವ ನಿರಾಶ್ರಿತರ ಕ್ಯಾಂಪಿನ ಸುಮಾರು 650ಕ್ಕೂ ಹೆಚ್ಚು ಜನಗಳಲ್ಲಿ ಇರುವವರೆಲ್ಲರ ಸರಾಸರಿ ವಯಸ್ಸು 60 ದಾಟಿದಂತಿತ್ತು. ವಯಸ್ಸಿನ ಜುಜುಬಿ ಲೆಕ್ಕಾಚಾರವನ್ನು ಯಾವತ್ತೋ ಚುಕ್ತಾ ಮಾಡಿದಂತಿದ್ದ




ದಲೈಲಾಮಾಗೆ ಭಾರತದಿಂದ ದೊರೆತ ಸ್ವಾಗತ




ಮಾಸಿದ ಗಾಜಿನ ಮೇಲೆ ಮಾಸದ ಹಂಬಲ